**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ**
ಬೇಲೂರು

**ಸಿ.ಸಿ.ನಂ.398/2020**

ಪಿರ್ಯಾದಿದಾರರು ಃ ರಾಜ್ಯ ಸರ್ಕಾರದ ಪರವಾಗಿ ,
ಹಳೇಬೀಡು ಪೊಲೀಸ್ ಠಾಣೆ.

ಃವಿರುದ್ಧಃ

ಆರೋಪಿತರು ಃ 1. ಶ್ರೀ ಪುಟ್ಟರಾಜು ಎಸ್.ಆರ್.
ಬಿನ್ ರುದ್ರೇಗೌಡ,
52 ವರ್ಷ,

2. ಶ್ರೀಮತಿ ಲತಾ
ಕೋಂ ಪುಟ್ಟರಾಜು ಎಸ್.ಆರ್.
40 ವರ್ಷ,

1 ಮತ್ತು 2ನೇ ಆರೋಪಿತರ ವಾಸಃ-
ಸಾಣೇನಹಳ್ಳಿ ಗ್ರಾಮ,
ಹಳೇಬೀಡು ಹೋಬಳಿ,
ಬೇಲೂರು ತಾಲ್ಲೂಕು.

**ಃಃ ದೋಷಾರೋಪಣೆಃಃ**

ಶ್ರೀ. ನಾಗೇಂದ್ರ, ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಜೆ.ಎಂ.ಎಫ್.ಸಿ ನ್ಯಾಯಾಲಯ, ಬೇಲೂರು ಆದ ನಾನು ಈ ಮೂಲಕ ಆರೋಪಿತರಾದ ನಿಮ್ಮ ವಿರುದ್ಧ ಮಾಡುವ ದೋಷರೋಪಣೆ ಏನೆಂದರೆ

ಮೊದಲನೆಯದಾಗಿ ದಿನಾಂಕ ಃ26.05.2020 ರಂದು ಮಧ್ಯಾಹ್ನ 02.40 ಗಂಟೆ ಸಮಯದಲ್ಲಿ ಹಳೇಬೀಡು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಸಾಣೇನಹಳ್ಳಿ ಗ್ರಾಮದಲ್ಲಿ ಚಾಸಾ-1 ಮತ್ತು ಚಾಸಾ-2 ರವರು ತಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ 1 ಮತ್ತು 2ನೇ ಆರೋಪಿತರಾದ ನೀವು ಜಗಳ ಮಾಡುವ ಸಮಾನ ಉದ್ದೇಶದಿಂದ ಬಂದು 1ನೇ ಆರೋಪಿಯ ಮನೆಯ ಮುಂದೆ ರಸ್ತೆಯ ಬದಿಯಲ್ಲಿ ಅಳವಡಿಸಿದ್ದ ನೀರಿನ ಪೈಪ್ ಲೈನ್ ಅನ್ನು ಕಿತ್ತು ಹಾಕಿದ ವಿಚಾರದಲ್ಲಿ ನೀವಿಬ್ಬರೂ ಜಗಳ ತೆಗೆದು ಚಾಸಾ-1 ಮತ್ತು 2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತಿಗೆ ಭಂಗವನ್ನುಂಟು ಮಾಡಿರುತ್ತೀರಿ, ಆ ಮೇರೆಗೆ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 504 ಸಹಕಲಂ 34ರಡಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ದೋಷಾರೋಪಣೆ ಇರುತ್ತದೆ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ಮತ್ತು 2ನೇ ಆರೋಪಿತರಾದ ನೀವು ಹಲ್ಲೆ ಮಾಡುವ ಸಮಾನ ಉದ್ದೇಶದಿಂದ ಬಂದು, 1ನೇ ಆರೋಪಿಯಾದ ನೀವು ಕೈಗಳಿಂದ ಚಾಸಾ-1 ಮತ್ತು 2 ರವರ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿರುತ್ತೀರಿ, ಆ ಮೇರೆಗೆ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 323 ಸಹಕಲಂ 34ರಡಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ದೋಷಾರೋಪಣೆ ಇರುತ್ತದೆ.

ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ಮತ್ತು 2ನೇ ಆರೋಪಿತರಾದ ನೀವು ಹಲ್ಲೆ ಮಾಡುವ ಸಮಾನ ಉದ್ದೇಶದಿಂದ ಬಂದು, 1ನೇ ಆರೋಪಿಯಾದ ನೀವು ಗುದ್ದಲಿಯಿಂದ ಚಾಸಾ-1 ರವರ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯವನ್ನುಂಟು ಮಾಡಿರುತ್ತೀರಿ, ಆ ಮೇರೆಗೆ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 324 ಸಹಕಲಂ 34ರಡಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ದೋಷಾರೋಪಣೆ ಇರುತ್ತದೆ.

ನಾಲ್ಕನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1ನೇ ಆರೋಪಿಯಾದ ನೀವು ಚಾಸಾ-1 ರವರನ್ನು ಕುರಿತು ನೀನಿನ್ನೂ ಬದುಕಿದ್ದೀಯಾ ನಿನ್ನನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುತ್ತೀರಿ, ಆ ಮೇರೆಗೆ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 506 ಸಹಕಲಂ 34ರಡಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ದೋಷಾರೋಪಣೆ ಇರುತ್ತದೆ.

**ಮೇಲ್ಕಂಡ ಆರೋಪಿತರಿಗೆ ದೋಷಾರೋಪಣೆಗಳನ್ನು ಅವರಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.**

ಸ್ಥಳಃ ಬೇಲೂರು
ದಿನಾಂಕಃ **19.12.2025**

(ಶ್ರೀ.ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ಬೇಲೂರು.

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು.

ಸಿ.ಸಿ. ಸಂಖ್ಯೆಃ **398/2020**

**1ನೇ ಆರೋಪಿಯ ಹೆಸರು** ಃ ಶ್ರೀ ಪುಟ್ಟರಾಜು ಎಸ್.ಆರ್.
**ತಂದೆಃಗಂಡನ ಹೆಸರು** ಃ ಬಿನ್ ರುದ್ರೇಗೌಡ,
**ವಯಸ್ಸು** ಃ 52 ವರ್ಷ,
**ವಾಸ ಸ್ಥಳ** ಃ ಸಾಣೇನಹಳ್ಳಿ ಗ್ರಾಮ,
ಹಳೇಬೀಡು ಹೋಬಳಿ,
ಬೇಲೂರು ತಾಲ್ಲೂಕು.

ಪ್ರಶ್ನೆಃ1 ನಾನು ತಮಗೆ ಓದಿ ಹೇಳಿದ ದೋಷಾರೋಪಣೆಗಳು ಅರ್ಥವಾಯಿತೇ?
ಉತ್ತರಃ

ಪ್ರಶ್ನೆಃ2 ಸದರೀ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ?
ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

ಮೇಲ್ಕಂಡ ಆರೋಪಿಯ ಪರೀಕ್ಷೆಯನ್ನು ನನ್ನ ಸಮಕ್ಷಮ ಮತ್ತು ವೈಯ್ಯಕ್ತಿಕ ಹೇಳಿಕೆ ಮೇಲೆ ಮಾಡಿಕೊಂಡಿದ್ದು ಮತ್ತು ದಾಖಲಾತಿಯ ಸಂಪೂರ್ಣ ಮತ್ತು ಸತ್ಯವಾದ ಆರೋಪಿಯ ಹೇಳಿಕೆಯನ್ನು ಒಳಗೊಂಡಿರುತ್ತದೆ ಎಂದು ಈ ಮೂಲಕ ದೃಡೀಕರಿಸುತ್ತೇನೆ.

ಸ್ಥಳಃ ಬೇಲೂರು
ದಿನಾಂಕಃ 19.12.2025

(ಶ್ರೀ. ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ಬೇಲೂರು

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು.

ಸಿ.ಸಿ. ಸಂಖ್ಯೆಃ **398/2020**

**2ನೇ ಆರೋಪಿಯ ಹೆಸರು** ಃ ಶ್ರೀಮತಿ ಲತಾ
**ತಂದೆಃಗಂಡನ ಹೆಸರು** ಃ ಕೋಂ ಪುಟ್ಟರಾಜು ಎಸ್.ಆರ್.,
**ವಯಸ್ಸು** ಃ 40 ವರ್ಷ,
**ವಾಸ ಸ್ಥಳ** ಃ ಸಾಣೇನಹಳ್ಳಿ ಗ್ರಾಮ,
ಹಳೇಬೀಡು ಹೋಬಳಿ,
ಬೇಲೂರು ತಾಲ್ಲೂಕು.

ಪ್ರಶ್ನೆಃ1 ನಾನು ತಮಗೆ ಓದಿ ಹೇಳಿದ ದೋಷಾರೋಪಣೆಗಳು ಅರ್ಥವಾಯಿತೇ?
ಉತ್ತರಃ

ಪ್ರಶ್ನೆಃ2 ಸದರೀ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ?
ಅಥವಾ ವಿಚಾರಣೆಯಾಗಬೇಕೋ?
ಉತ್ತರಃ

ಮೇಲ್ಕಂಡ ಆರೋಪಿಯ ಪರೀಕ್ಷೆಯನ್ನು ನನ್ನ ಸಮಕ್ಷಮ ಮತ್ತು ವೈಯ್ಯಕ್ತಿಕ ಹೇಳಿಕೆ ಮೇಲೆ ಮಾಡಿಕೊಂಡಿದ್ದು ಮತ್ತು ದಾಖಲಾತಿಯ ಸಂಪೂರ್ಣ ಮತ್ತು ಸತ್ಯವಾದ ಆರೋಪಿಯ ಹೇಳಿಕೆಯನ್ನು ಒಳಗೊಂಡಿರುತ್ತದೆ ಎಂದು ಈ ಮೂಲಕ ಧೃಡೀಕರಿಸುತ್ತೇನೆ.

ಸ್ಥಳಃ ಬೇಲೂರು
ದಿನಾಂಕಃ 19.12.2025

(ಶ್ರೀ. ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಹಾಗೂ
**ಜೆ.ಎಂ.ಎಫ್.ಸಿ., ಬೇಲೂರು**